# B.A IIIrd Semester

## DEPT OF SOCIOLOGY

## DSC 1 C: SOCIAL RESEARCH METHODS

## Unit –I: Introduction
## Meaning, Nature, Scope and Significance of Social Research

# ಸಾಮಾಜಿಕ ಸಂಶೋಧನಾ ವಿಧಾನಗಳು

## ಪ್ರಸ್ತಾವನೆ

ಸಾಮಾಜಿಕ ಸಂಶೋಧನೆಯಲ್ಲಿ ಮರೆಯಾಗಿರುವ ಅಥವಾ ಗಮನಕ್ಕೆ ಬರುವ ವಿಷಯ, ಸಂಗತಿಗಳನ್ನು ಅರಿಯುವ ಮತ್ತು ಬೆಳಕು ಬೀರುವ ವಿಧಾನವನ್ನು ಸಂಶೋಧನೆ ಎನ್ನುವರು. ಪ್ರತಿಯೊಂದು ಮಾನವ ಸಮಾಜದಲ್ಲಿ ನಡೆಯುವ ಎಲ್ಲಾ ಘಟನೆಗಳಿಗೂ ಅದರದೆ ಆದ ಕಾರಣ ಪರಿಣಾಮಗಳು ಇರುತ್ತವೆ. ಆ ಘಟನೆಗಳನ್ನು ಕ್ರಮಬದ್ಧವಾಗಿ ಅಧ್ಯಯನಮಾಡಿ ತರ್ಕಬದ್ಧವಾಗಿ ವಿಶ್ಲೇಷಿಸಿದಾಗ ದೊರೆಯುವ ಫಲಿತಾಂಶಗಳು ವಿಷಯದ ನೈಜತೆಯನ್ನು ತಿಳಿಸುತ್ತದೆ. ವಿಷಯವನ್ನು ಅರಿಯುವ ಕುತುಹಲವನ್ನು ಮೂಡಿಸುವ ಕಾರ್ಯಗಳ ಕಾರಣ ಸಂಬಂಧವನ್ನು ತಿಳಿಯಲು ಪುನ: ಪುನ: ವಿಷಯವನ್ನು ಶೋಧಿಸಿ ಸಾಮಾಜಿಕ ಜೀವನದ ಘಟನೆಗಳ ಕ್ರೀಯೆ, ಪ್ರಕ್ರೀಯೆಗಳನ್ನು ಕುರಿತು ಅಧ್ಯಯನ ಮಾಡುವುದು ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ. ಹಾಗೂ ಸಾಮಾಜಿಕ ವ್ಯವಸ್ಥೆಗಳ ದೃಷ್ಟಿಕೋನ, ಸಾಮಾಜಿಕ ಸಮಸ್ಯೆಗಳ ಬಗ್ಗೆ ವಿಮರ್ಶೆ, ಪರಿಹಾರವನ್ನು ಸೂಚಿಸುವುದೆ ಸಂಶೋಧನೆಯಾಗಿದೆ. ರಾಷ್ಟ್ರ ಮತ್ತು ಸಮಾಜ ಜೀವನದ ಅಭಿವೃದ್ಧಿಗಾಗಿ ಯೋಜನೆಗಳನ್ನು, ಕಾರ್ಯಚಟುವಟಿಕೆಗಳನ್ನು ಮತ್ತು ಸಂಶೋಧನೆಯ ಮೂಲಕ ರೂಪಿಸುವುದಾಗಿದೆ. ಹೀಗಾಗಿ ಇಲ್ಲಿ ಒಂದು ವಸ್ತು ವಿಷಯದ ಕುರಿತು ವಿಷಯವನ್ನು ಕ್ರಮಬದ್ಧವಾಗಿ ಸಂಶೋಧಿಸಿ, ಪರಿಶೋಧಿಸಿ, ಆ ಕ್ಷೇತ್ರದಲ್ಲಿ ಹೊಸ ಜ್ಞಾನವನ್ನು ಪಡೆಯುವ ಪ್ರಯತ್ನವನ್ನು ಸಂಶೋಧನೆ ಎಂದು ಕರೆಯುತ್ತಾರೆ.

ಸಂಶೋಧನೆ ಎಂಬ ಪದವು ಲ್ಯಾಟಿನ ಭಾಷೆಯಿಂದ ಬಂದಿದೆ ಇದರ ಅರ್ಥ ಮನರಶೋಧಿಸು ಪರಿಶೋದಿಸು ಎಂದಾಗುತ್ತದೆ. ಸಂಶೋಧನೆ ಎಂದರೆ ಒಂದು ವಿಷಯವನ್ನು ವ್ಯವಸ್ಥಿತವಾದ ವಿಧಾನದಿಂದ, ಶೋಧಿಸಿ, ಸಂಶೋಧಿಸಿ, ಶುದ್ಧಗೊಳಿಸು ಎಂಬ ಪರ್ಯಾಯ ಪದಗಳನ್ನು ಬಳಸಬಹುದು. ಸಂಶೋಧನೆ ಎಂಬ ಪದವು ಎರಡು ಪದಗಳಿಂದ ಕೂಡಿದೆ ಅವು ಸಂ: ಎಂದರೆ ಸಮ್ಯುಕ್ ಅಂದರೆ ಚೆನ್ನಾಗಿ, ಎಂಬ ಅರ್ಥವನ್ನು ಕೊಟ್ಟರೆ, ಶೋಧನೆ ಎಂದರೆ ಶೋಧಿಸು ಪರಿಶೋಧಿಸು, ಶುದ್ಧಿಕರೀಸು, ಸ್ವಚ್ಛಗೊಳಿಸು ಮತ್ತು ನಿಶ್ಚಿತಡಿಸು ಎಂಬ ಅರ್ಥವನ್ನು ನೀಡುತ್ತದೆ. ಹೀಗೆ ಸಂಶೋಧನೆ ಎಂದರೆ ಒಂದು ವಿಷಯವನ್ನು ಕ್ರಮಬದ್ಧವಾಗಿ ಶೋಧಿಸಿ, ಶುದ್ಧಗೊಳಿಸಿ, ಅರ್ಥಪೂರ್ಣವಾಗಿ ವ್ಯವಸ್ಥಿತವಾದ ವಿಧಾನವಮ್ಮು ಬಳಸಿ ಅದರದೆ ಆದ ಪರಿಕಲ್ಪನೆಯಿಂದ ಒಂದು ಸಿದ್ದಾಂತವನ್ನು ರಚಿಸಿ ಅಭ್ಯಾಸವನ್ನು ವಿಸ್ತರಿಸುವ & ಪರಿಶೀಲಿಸುವ ಜ್ಞಾನವಾಗಿದೆ. ಹೀಗೆ ಸಂಶೋಧನೆಯ ವಿಧಾನದಿಂದ ಪಡೆದುಕೊಂಡು ಜ್ಞಾನವನ್ನು ವೈಜ್ಞಾನಿಕ ತಳಹದಿಯಲ್ಲಿ ಶೋಧಿಸಿ, ಹುಡುಕಿ, ಶುದ್ಧಿಕರಣದ ಕಾರ್ಯದಿಂದ ಸತ್ಯವನ್ನು ಕಾಣುವವರೆಗೆ ಅನ್ವೇಷಣೆಯಲ್ಲಿ ನಿರಂತರವಾಗಿ ಮುಂದುವರೆದಿರುತ್ತದೆ. ಮತ್ತು ಸಂಶೋಧನೆಯು ಜಗತ್ತಿನ ಎಲ್ಲಾ ಜ್ಞಾನರಾಶಿಗಳ ಗುರಿಯಾಗಿರುತ್ತದೆ. ಅಸ್ತಿತ್ವದಲ್ಲಿರುವ ಎಲ್ಲಾ ಸಮಾಜವಿಜ್ಞಾನ ವಿಷಯಗಳು ಸತ್ಯ ಶೋಧನೆಯ ಫಲಗಳೆ ಆಗಿವೆ. ಇಲ್ಲಿ ಮನ: ಮನ: ಹುಡುಕುವ ಮತ್ತು ಅನ್ವೇಷಿಸುವ ಕಾರ್ಯವು ನಿರಂತರವಾಗಿ ಮತ್ತು ಪ್ರಬಲವಾಗಿರುತ್ತದೆ. ಸಂಶೋಧನೆಯ ಒಳಾರ್ಥವು ಇನ್ನು ಆಳವಾಗಿರುವುದರಿಂದ ಸಮಾಜದ ಸಂಗತಿಗಳ ಅರಿವು ಅಲ್ಪ ಸ್ವಲ್ಪ ಜ್ಞಾನದ ಆಧಾರದ ಮೇಲೆ ನೈಜವಾಗಿ ಹುದುಗಿಕೊಂಡಿರುವ ಸತ್ಯಾಂಶಗಳನ್ನು ಶೋಧಿಸಿ ಪ್ರಕಟಪಡಿಸುವುದಾಗಿದೆ. ಹಳೆಯ ಅಥವಾ ಸಮಾಜದಲ್ಲಿ ಸಮಸ್ಯೆಯಾಗಿ ಕಾಡುತ್ತಿರುವ ಪ್ರಚಲಿತ ವಿಷಯಗಳನ್ನು ಯೋಜನಾಬದ್ಧವಾಗಿ ವೈಜ್ಞಾನಿಕ ವಿಧಾನದಿಂದ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಶೊಧಿಸಿ, ಅನ್ವೇಷಿಸಿ, ಸಂಗ್ರಹಿಸಿ ಮತ್ತು ಕ್ರೋಢೀಕರಿಸಿ ವಸ್ತುನಿಷ್ಟವಾಗಿ ಸಾಮಾನ್ಯೀಕರಣಗೊಳಿಸಿದ ವಿವರವನ್ನು ಪರಿಷ್ಕರಿಸಿ ನಾವಿನ್ಯರೀತಿಯಲ್ಲಿ ಪಕ್ಷಪಾತವಿಲ್ಲದೆ ತೀರ್ಮಾನಗಳನ್ನು ಕೈಗೊಳ್ಳುವುದು ಮತ್ತು ವಿಶ್ಲೇಷಿಸಿ ಪರಿಹಾರವನ್ನು ಸೂಚಿಸುವುದಾಗಿದೆ. ಈ ಅಧ್ಯಯದಲ್ಲಿ ಸಂಶೋಧನೆಯ ಅರ್ಥ, ವ್ಯಾಖ್ಯೆ, ವ್ಯಾಪ್ತಿ, ಸ್ವರೂಪ, ಲಕ್ಷಣಗಳು ಮತ್ತು ಅಧ್ಯನದ ಮಹತ್ವವನ್ನು ಒಳಗೊಂಡಿರುತ್ತದೆ.

## ಸಂಶೋಧನೆಯ ಅರ್ಥ MEANING OF THE RESEARCH

ಸಂಶೋಧನೆ ಎಂಬ ಪದವು ಎರಡು ಪದಗಳಿಂದ ಕೂಡಿದೆ ಅವು ಸಂ. ಮತ್ತು ಶೋಧನೆ ಎಂಬ ಪದಗಳಿಂದ ಬಂದಿದೆ. “ಸಂ:” ಎಂದರೆ “ಸಮ್ಯುಕ್” ಅಂದರೆ ಚೆನ್ನಾಗಿ, ಎಂಬ ಅರ್ಥವನ್ನು ಕೊಟ್ಟರೆ,

“ಶೋಧನೆ” ಎಂದರೆ ಶೋಧಿಸು ಪರಿಶೋಧಿಸು, ಶುದ್ಧಿಕರೀಸು, ಸ್ವಚ್ಚಗೊಳಿಸು ಮತ್ತು ನಿಶ್ಚಿಪಡಿಸು ಎಂಬ ಅರ್ಥವನ್ನು ನೀಡುತ್ತದೆ. ಅಂದರೆ ಒಬ್ಬ ರೈತನು ಬೆಳೆದ ಬೆಳೆಗಳನ್ನು ಒಂದು ರಾಶಿ ಮಾಡುವಾಗ ಕಸ , ಕಡ್ಡಿ, ಹರಳುಗಳನ್ನು ಹೊರತೆಗೆದು ಕಾಳುಗಳನ್ನು ಮಾತ್ರ ಎತ್ತಿಕೊಳ್ಳುವಂತೆ ಸಂಗ್ರಹಿಸಿದ ಸಂಶೋಧನಾ ವಿಷಯವನ್ನು ಕ್ರೋಢಿಕ್ರಿಸಿ ಅವಶ್ಯಕವಾಗಿರುವುದನ್ನು ಮಾತ್ರ ಸ್ವೀಕರಿಸಿ ಹೊಸದಾದ ಸಿದ್ಧಾಂತವನ್ನು ಸೃಷ್ಟಿಸುವುದಾಗಿದೆ. ಹೀಗೆ ಸಂಶೋಧನೆ ಎಂದರೆ ಒಂದು ವಿಷಯವನ್ನು ಕ್ರಮಬದ್ಧವಾಗಿ ಶೋಧಿಸಿ, ಶುದ್ಧಗೊಳಿಸಿ, ಅನ್ವೇಶಿಸಿ, ನಿರಂತರವಾಗಿ ಪರೀಕ್ಷೆಗೊಳಪಡಿಸಿ ಅರ್ಥಪೂರ್ಣವಾಗಿ ವಿಶ್ಲೆಷಿಸಿ ವ್ಯವಸ್ಥಿತವಾದ ಸಾಮಾಜಿಕ ಸಂಶೋಧನೆಯ ವಿಧಾನದಿಂದ ಪಡೆದುಕೊಂಡ ಜ್ಞಾನವನ್ನು ವೈಜ್ಞಾನಿಕ ತಳಹದಿಯಲ್ಲಿ ಹೊಸ ವಿಷಯನ್ನು ಪುನ್: ಪುನ್: ಸಂಶೋಧಿಸಿ, ಕಂಡುಹಿಡಿದು, ವಿವರಿಸಿ ಸೃಷ್ಟಿಸಿ, ಪರಸ್ಪರ ಸಂಬಂಧಗಳನ್ನು ಮತ್ತು ಅಂತರಕ್ರಿಯಯನ್ನು ವಿಶ್ಲೇಷಿಸಿ ನಿರ್ದಿಷ್ಟಪಡಿಸಿದ ಅದ್ಯಯನ ಉದ್ದೇಶವನ್ನು ಸಾಧಿಸುವುದಗಿದೆ.

ಆಂಗ್ಲ ಭಾಷೆಯ ಸಂಶೋಧನೆಯ ಪದವನ್ನು ಎರಡು ಪದಗಳಿಂದ ಕೂಡಿದೆ. ರೀಸರ್ಚ್ ರಿ ಎಂದರೆ ಪುನ:, ಹಾಗೆ ಎಂದರ್ಥ ಸರ್ಚ್ ಎಂದರೆ ಹುಡುಕು ಎಂಬ ಅರ್ಥವನ್ನು ಒಳಗೊಂಡಿದೆ.

### ಸಂಶೋಧನೆ ಎಂದರೇನು?

ಒಂದು ವಸ್ತು ಅಥವಾ ವಿಷಯದ ಬಗ್ಗೆ ವಿವರವಾಗಿ ವಿಚಾರಿಸಿ,ವಿಶ್ಲೇಷಣೆ ಮಾಡಿ ವಿಮರ್ಶಾತ್ಮಕವಾದ ಸಂಬಂಧದೊಂದಿಗೆ ಹೊಸ ಹೊಸ ಸಿದ್ಧಾಂತಗಳನ್ನು ಜ್ಞಾನ ವೃದ್ಧಿಸುವ ಗುರಿಯನ್ನು ಹೊಂದಿರುವ ಪ್ರಕ್ರಿಯೆಯನ್ನು ಸಂಶೋಧನೆ ಎನ್ನುವರು.

### ಸಂಶೋಧನೆಯ ವ್ಯಾಖ್ಯಾನಗಳು : Definition of the Social research

### ವಿಲಿಯಂ ಸ್ಕಾಟ್

“ಸಾಮಾಜಿಕ ಸಂಶೋಧನೆಯು ಮಾನವ ಸಮುದಾಯಗಳು, ಸಮುಹಗಳು, ಸಾಮಾಜಿಕ ಅಂತರಕ್ರಿಯೆಯ ಪ್ರಕ್ರಿಯೆಗಳು ಅಧ್ಯಯನಗಳಿಗೆ ಪ್ರಾಮುಖ್ಯತೆ ನಿಡುವುವದಾಗಿದೆ “

### ಪಿ ವಿ ಯಂಗ್

"ಕ್ರಮಬದ್ದವಾದ ವಿಧಾನಗಳ ಮೂಲಕ ಹೊಸ ಘಟನೆಗಳನ್ನು ಪರಿಶಿಲಿಸಿ ಅದರ ಪರಿಣಾಮಗಳನ್ನು ಪರಸ್ಪರ ಸಂಬಂಧಗಳ ಸಾಮಾನ್ಯ ವಿವರಣೆ &ಪ್ರಕಟಿತ ನಿಯಮಗಳನ್ನು ನಿಯಂತ್ರಿಸುವುದುನ್ನು ಸಂಶೋಧನೆ ಎಂದು ಕರೆದಿದ್ದಾರೆ "

**ಈ ಸ ಬೋಗಾರ್ಡಸ್**

"ಸಹವರ್ತಿಗಳಾಗಿ ಜಿವಿಸುವ ಜನರ ಕಾರ್ಯ ನಿರ್ವಹಣೆಯ ಪ್ರಕ್ರಿಯೆಗಳ ಪರಿಶೀಲನೆಯೇ ಸಾಮಾಜಿಕ ಸಂಶೋಧನೆ ಎಂದಿದ್ದಾರೆ ಸತ್ಯವನ್ನು ತಿಳಿಯುವ ವ್ಯವಸ್ಥಿತ ತನಿಖೆ "

**ಯಂಗರವರ ಪ್ರಕಾರ**

"ಹೊಸ ವಿಷಯಗಳ ಅನ್ವೇಷಣೆ ಅಥವಾ ಹಳೆಯ ವಿಷಯಗಳ ಪರಿಶೀಲತೆ ಮತ್ತು ಪರೀಕ್ಷೆಗಾಗಿ ಸೂಕ್ತ ಸದ್ಧಾಂತಿಕ ಉಲ್ಲೇಖಗಳ ಚೌಕಟ್ಟಿನೊಳಗೆ ಹೊಸ ತತ್ವಗಳನ್ನು ಬೆಳೆಸಲು ತರ್ಕಬದ್ಧ ಹಾಗು ವ್ಯವಸ್ಥಿತ ರೀತಿಯ ತಂತ್ರಗಳ ಮೂಲಕ ಕೈಗೊಂಡ ಶಾಸ್ತ್ರೀಯ ಅಧ್ಯಯನವೇ ಸಂಶೋಧನೆ".

**ಎಲ್ ವಿ ರೆಡಮ್ಯಾನ & ಮೋರೆ**

"ಹೊಸ ಜ್ಞಾನವನ್ನು ಕ್ರಮಬದ್ದವಾದ ರೀತಿಯಲ್ಲಿ ಪಡೆಯುವ ಪ್ರಯತ್ನವನ್ನು ಸಂಶೋಧನೆ ಎಂದು ಕರೆದಿದ್ದಾರೆ"

ಒಟ್ಟಿನಲ್ಲಿ ಹೇಳುವುದಾದರ ಯಾವುದೆ ಅಧ್ಯಯನ ವಿಷಯವನ್ನು ಜ್ಞಾನ ಕ್ಷೇತ್ರದ ತಳಹದಿಯಲ್ಲಿ ಹೊಸ ಸತ್ಯಾಂಶಗಳ ಸಂಶೋಧನೆಯ ಮೂಲಕ ಬಹಳ ಜಾಗರುಕತೆಯಿಂದ ನಿಧಾನವಾಗಿ ನಡೆಸಲಾಗುವ ಪ್ರಕ್ರಿಯೆಯು ಮತ್ತು ನಿರಂತರವಾದ ಅಧ್ಯಯನವನ್ನು ಮಾಡುತ್ತಾ ನಾವಿನ್ಯತೆಯ ಅಂಶಗಳನ್ನು ಕಂಡುಕೊಳ್ಳುತ್ತಾ ಸಾಗುವುದನ್ನು ಸಂಶೋಧನೆ ಎನ್ನುವರು

## ಸ್ವರೂಪ NATURE OF THE SOCIAL RESEARCH

ಒಂದು ಮನುಷ್ಯ ಸುಂದರವಾದ ಹೂವನ್ನು ನೋಡಿದಾಗ ಹರ್ಷದಿಂದ ಮನಸ್ಸು ಸಹೃದಯರಾಗಿ ಅರಳುವಂತೆ ಮನಸ್ಸಿನಲ್ಲಿ ಮೂಡಿಬಂದಿರುವ ಭಾವಗಳನ್ನು ವಿಭಿನ್ನ ಪರೀಕ್ಷೆಗಳಿಗೆ ಒಡ್ಡಿ ಸೃಜನಶೀಲ ಕಲ್ಪನೆಗಳನ್ನು ಬೆಳೆಸಿಕೊಳ್ಳುವುದರ ಮೂಲಕ ಕವಿಯಾಗಿ, ಸಾಹಿತಿಯಾಗಿ, ಶಾಸ್ತ್ರಜ್ಞನಾಗಿ ಮತ್ತು ವಿಮರ್ಶಕನಾಗಿ

ಬೆಳೆಯುವ ಪ್ರವೃತ್ತಿಯ ಗುಣಗಳು ಬೆಳೆಸಿಕೊಳ್ಳಲು ಕಾರಣವಾಗುತ್ತವೆ. ಹೀಗಾಗಿ ಹೇಗೆ ಒಬ್ಬ ವ್ಯಕ್ತಿಯು ಶಾಸ್ತ್ರಕಾರರಾಗಿ, ಸಾಹಿತಿಯಾಗಿ, ತತ್ವಜ್ಞಾನಿಯಾಗಿ ಬೆಳೆಯಲು ಆತನ ಗುಣಲಕ್ಷಣಗಳು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಹಾಗೆಯೆ ಸಂಶೋಧನೆಯ ಸ್ವರೂಪವು ಊಹೆ, ಪ್ರಾಕಲ್ಪನೆ, ಸಮೀಕ್ಷೆ, ಸಾಮಗ್ರಿಯ ಸಂಗ್ರಹಗಳು ಸಂಶೋಧನೆ ಬಂಡಿಯ ಚಕ್ರಗಳಾದರೆ ಸಂಶೋಧಕನ ಪ್ರತಿಭೆ, ಕಲ್ಪನೆ, ಪಾಂಡಿತ್ಯ ಮತ್ತು ನಿರಂತರ ಪ್ರಯತ್ನ ಸಾರಥಿಯಂತೆ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಈ ಕೆಳಗಿನ ಅಂಶಗಳು ಸಂಶೋಧನೆ ಮತ್ತು ಸಂಶೋಧನೆಯ ಕಾರ್ಯವೈಖರಿಯಿಂದ ವ್ಯಕ್ತಿ ಮತ್ತು ಸಮಾಜಕ್ಕೆ ಅದರಿಂದಾಗುವ ಪ್ರಯೋಜನಗಳನ್ನು ಒಳಗೊಂಡಿವೆ.

1. ಸಂಶೋಧನೆಯು ಹಳೆಯ ಸಿದ್ಧಾಂತಗಳನ್ನು ಪರೀಕ್ಷಿಸುವುದು
2. ಸಂಶೋಧನೆಯು ವಿಷಯವನ್ನು ಒಗ್ಗೂಡಿಸುವ ಪ್ರಕ್ರಿಯೆಯಾಗಿದೆ
3. ಜ್ಞಾನದ ಬೆಳವಣಿಗೆಯಾಗಿಒಂದು ಪತ್ತೆದಾರಿ ಕೆಲಸವಾಗಿದೆ.
4. ಸಂಶೋಧನೆಯು ವೈಜ್ಞಾನಿಕ ವಿಧಾನವಾಗಿದೆ
5. ಮಾನವನ ವರ್ತನೆಯುಸಂಬಂಧವನ್ನು ಅನ್ವೇಷಿಸುತ್ತದೆ.
6. ಸಂಶೋಧನೆಯು ಭೌತಿಕ ನೈಸರ್ಗಿಕ ವಿಜ್ಞಾನವಾಗಿದೆ.
7. ಸಾಮಾಜಿಕ ದತ್ತಾಂಶಗಳನ್ನು ಒಳಗೊಂಡಿದೆ:
8. ಸಾಮಾಜಿಕ ಸಂಗತಿಗಳು ಮತ್ತು ಅಂಶಗಳನ್ನು ಮಾತನಾಡುತ್ತವೆ.
9. ಸಾಮಾಜಿಕ ಸಮಸ್ಯೆಯನ್ನು ಪರಿಹರಿಸುವ ಗುರಿ ಹೊಂದಿದೆ

## ಸಂಶೋಧನೆಯ ವಾಪ್ತಿ SCOPE OF THE SOCIAL RESEARCH

1) ಸಾಮಾಜಿಕ ಸಂಶೋಧನೆಯು ವಿಸ್ತಾರವಾಗಿದೆ.
2) ಸಾಮಾಜಿಕ ಸಂಶೋಧನೆಯು ವಿಚಾರಗಳನ್ನು ಆಧಾರಿಸಿದೆ.
3) ಸಾಮಾಜಿಕ ಸಂಶೋಧನೆಯು ವೈಜ್ಞಾನಿಕ ತಂತ್ರಗಳನ್ನು ಅನ್ವಯಿಸಿಕೊಳುತ್ತಿದೆ.
4) ಅದ್ಯಯನ ಸಿದ್ದಾಂತಗಳನ್ನು ಲೆಖಕರು ರಚಿಸಿಕೋಳುತ್ತಾರೆ
5) ಸಂಶೊಧನೆಯ ಅಧ್ಯಯನವು ಅನುಭವವನ್ನು ಆಧಾರಿಸಿದೆ.
6) ಅಧ್ಯಯನ ವಿಷಯಗಳನ್ನು ಭಾಗಗಳಾಗಿ ವಿಂಗಡಿಸಬಹುದು.

7) ಸಾಮಾಜಿಕ ಸಂಶೋಧನೆಯು ಹೋಲಿಕೆಯ ಮೂಲಕ ಅಧ್ಯಯನ ಮಾಡುವ ವಿಧಾನವನ್ನು ಅನುಸರಿಸುತ್ತದೆ

8) ಸಂಶೋಧನೆಯು ಮತ್ತು ಸಮೀಕ್ಷೆ ನಮೂನೆ.

9) ಅನಿಸಿಕೆ ವಿಚಾರಗಳನ್ನು ಸಂಗ್ರಹಿಸಿ ವಿವರಿಸುತ್ತದೆ.

10) ಸಮಸ್ಯೆಗಳನ್ನು ಆಧಾರಸಹಿತವಾಗಿ ವಿವರಿಸಬಹುದು.

11)ವೃತ್ತಿಪರ ಕ್ಷೇತ್ರಗಳಲ್ಲಿ ಸಾಮಾಜಿಕ ಆಸಕ್ತಿ ಬೆಳೆಸುತ್ತದೆ.

## ಸಂಶೋಧನಾ ಅಧ್ಯಯನದ ಮಹತ್ವ

## IMPORTANCE OF THE STUDY OF SOCIAL RESEARCH

1. ಸಾಮಾಜಿಕ ಸಂಶೋಧನೆಯು ನಿರ್ದಿಷ್ಟ ಪಡಿಸಿದ ಉದ್ದೇಶವನ್ನು ಈಡೆರಿಸುತ್ತದೆ.
2. ಸಾಮಾಜಿಕ ಸಂಶೊಧನೆಯು ಗುಣಾತ್ಮಕ ಅಂಶವನ್ನು ಹೊಂದಿದೆ.
3. ಸಾಮಾಜಿಕ ಸಂಶೋಧನೆ ನಿಖರವಾದದ್ದು.
4. ಕಾಲ್ಪನಿಕ ಅಂಶವನ್ನು ಸಾಮಾನ್ಯಿಕರಣದ ಸ್ಥಾಪನೆ ಮಾಡುತ್ತದೆ.
5. ಸಾಮಾಜಿಕ ಸಂಶೋಧನೆಯನ್ನು ವಿದ್ಯಮಾನಗಳ ನಡುವಿನ ವೈಜ್ಞಾನಿಕ ಅಂತಕ್ರಿಯೆಯನ್ನು ಒಳಗೊಂಡಿದೆ.
6. ಆಂತರಿಕ ಶಿಸ್ತನ್ನು ಬೆಳೆಸುತ್ತದೆ
7. ಕಲ್ಪನಾ ಶಕ್ತಿ & ಆಂತರಿಕದೃಷ್ಟಿಯನ್ನು ವೃದಿಸುತ್ತದೆ.
8. ಜ್ಞಾನದ ವಿಸ್ತರಣೆಯನ್ನು ಮಾಡುತ್ತದೆ.
9. ಸಾಮಾಜಿಕ ಸಂಶೋಧನೆಯಲ್ಲಿ ತನ್ನದೆ ಆದ ವಸ್ತು ವಿಷಯದ ಅಗತ್ಯತೆ ಇದೆ.
10. ಶೈಕ್ಷಣಿಕ ಮಹತ್ವವನ್ನು ಹೊಂದದೆ
11. ಶಿಕ್ಷಣ& ತತ್ವಶ್ತಾಕ್ಕೆ ಸ್ವಾಸ್ಥ್ಯವನ್ನು ಕಲ್ಪಿಸುತ್ತದೆ.

## ಸಾಮಾಜಿಕ ಸಂಶೋಧನೆಯ ಪ್ರಾಮುಖ್ಯತೆ

**Social research** deals with **social** phenomena. It **studies** human behavior and their feelings**. It** helps us in making laws and the relation between **social** laws and their factors. The main purpose of **social research** is to discover those laws which can be proper guidelines for studying human contact and behavior.

1. ಜ್ಞಾನದ ಬೆಳೆವಣಿಗೆ ಕೊಡುಗೆ ನೀಡುತ್ತದೆ.
2. ಸಂಶೋಧನೆಯ ಫಲಿತಾಂಶಗಳ ನಿಯಮ ತತ್ವ ಮತ್ತು ಸಿದ್ದಾಂತಗಳನ್ನು ತಿದ್ದುಪಡಿ ಮಾಡಲು ಅವಕಾಶ
3. ಸಾಮಾಜದ ಪ್ರಗತಿಗೆ ಸಹಕಾರಿಯಾಗಿದೆ
4. ವೆಚಾರಿಕ ದೃಷ್ಟಿಕೊನ ಬೆಳೆಸುತ್ತದೆ
5. ಎಲ್ಲಾ ಸಮಾಜ ವಿಜ್ಞನಗಳ ಬೆಳೆವಣಿಗೆಗೆ ಸಹಕಾರಿಯಾಗಿದೆ
6. ಸಾಮಾಜಿಕ ಪರಿವರ್ತನೆಯನ್ನು ಅರ್ಥಿಯಿಸುತ್ತದೆ
7. ಪರಿಹಾರವನ್ನು ಕಂಡುಹಿಡಿಯಲು ಪ್ರಾಯೋಗಿಕ ಸುಳಿವನ್ನು ನೀಡುತ್ತದೆ
8. ಸಾಮಾಜಿಕ ಸಮಸ್ಯೆಯ ಸ್ವರುಪವನ್ನು ತಿಳಿದುಕ್ಕೊಲು ಒಳನೊಟ ಬೆಳೆಸುತ್ತದೆ
9. ಸಂಶೋಧನೆಯು ವಾಣಿಜ್ಯ ಮಹತ್ವವನ್ನು ಹೊಂದಿದೆ ಸಾಮಾಜಿಕ ಸಮಸ್ಯಗಳ ಬಗ್ಗೆ ಅರಿವನ್ನು ಮುದಿಸುತ್ತದೆ
10. ಸರ್ಕಾರದ ಯೋಜನೆ ಮತ್ತು ಅಭಿವೃದ್ದಿ ಕಾರ್ಯಕ್ರಮದ ಬಗ್ಗೆ ವಿವರಿಸುತ್ತದೆ
11. ವಿಭಿನ್ನ ವಿಷಯಗಳನ್ನು ಅದ್ಯಯನ ಮಾಡಲು ಸಹಯಾವಾಗುತ್ತದೆ
12. ಶೈಕ್ಷಣಿಕ ಮಹತ್ವವನ್ನು ವಿವರಿಸುತ್ತದೆ.